सत्यमेव जयते
Goverment Of India

Mid Day Meal Scheme

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ

ಕರ್ನಾಟಕ ಸರ್ಕಾರ

unicef
for every child

# ಸ್ವಚ್ಛ ಭಾರತ, ಸ್ವಚ್ಛ ವಿದ್ಯಾಲಯ

## ಗುಣಮಟ್ಟದ ಕಾರ್ಯವಿಧಾನ ಮತ್ತು ನಿರ್ವಹಣೆ






# ಸ್ವಚ್ಛ ಭಾರತ, ಸ್ವಚ್ಛ ವಿದ್ಯಾಲಯ

**ಪೀಠಿಕೆ**

ಮಾನವ ಅಭಿವೃದ್ಧಿಯಲ್ಲಿ ಆರೋಗ್ಯ, ಶಿಕ್ಷಣ ಹಾಗೂ ಆರ್ಥಿಕ ಸ್ಥಿತಿಗಳನ್ನೊಳಗೊಂಡ ಇನ್ನಿತರ ಅಭಿವೃದ್ಧಿಮಾಪಕ ಅಂಶಗಳಿಗಿಂತಲೂ ಮೊದಲಾಗಿ **'ಶುದ್ಧ ನೀರು'** ಮತ್ತು **'ನೈರ್ಮಲ್ಯ'**ಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ನೀಡಲಾಗಿದೆ. **'ಸುಸ್ಥಿರ ಅಭಿವೃದ್ಧಿಯ ಗುರಿ'(ಎಸ್‌ಡಿಜಿ)**ಯು 2030ರ ಹೊತ್ತಿಗೆ ಮೂಲ ಸೌಕರ್ಯದಲ್ಲಿ ಶುದ್ಧ ನೀರು ಮತ್ತು ನೈರ್ಮಲ್ಯದ ಮೇಲೆ ಸಮರ್ಪಕ ಹೂಡಿಕೆ ಮಾಡುವ ಮೂಲಕ ಪ್ರತೀ ಹಂತಗಳಲ್ಲೂ ನೈರ್ಮಲ್ಯದ ಸೌಲಭ್ಯವನ್ನು ಒದಗಿಸುವುದಾಗಿದೆ. ಹೀಗೆ ಪ್ರೋತ್ಸಾಹದ ಮೂಲಕ **'ಸುರಕ್ಷಿತ ಮತ್ತು ಶುದ್ಧ ಕುಡಿಯುವ ನೀರು'** ಹಾಗು **'ನೈರ್ಮಲ್ಯ'**ವನ್ನು ಸಾರ್ವತ್ರಿಕವಾಗಿ ಒದಗಿಸುವ ಗುರಿಯನ್ನು ಹೊಂದಿದೆ (ಸುಸ್ಥಿರ ಅಭಿವೃದ್ಧಿ ಗುರಿ, 2015).

ಶಾಲೆಗಳಲ್ಲಿ ಸಾಕಷ್ಟು ಪ್ರಮಾಣದ ಸುರಕ್ಷಿತ, ಶುದ್ಧ ಕುಡಿಯುವ ನೀರಿನ ಪೂರೈಕೆಯ ಖಾತ್ರಿ, ನೈರ್ಮಲ್ಯದ ಉತ್ತಮ ನಿರ್ವಹಣೆ, ಕೈತೊಳೆಯುವ ಸೌಲಭ್ಯಗಳು ಮತ್ತು ಶುದ್ಧತೆಯ ಕುರಿತಾದ ಕಾಳಜಿ ಇವು 'ಸುಸ್ಥಿರ ಅಭಿವೃದ್ಧಿಯ ಗುರಿ'ಯ ಮುಂದಿರುವ ಸವಾಲುಗಳಾಗಿದ್ದು, ಇದನ್ನು ಶಾಲೆಗಳಲ್ಲಿ **'ನೀರು, ನೈರ್ಮಲ್ಯ ಮತ್ತು ಆರೋಗ್ಯ ಶಿಕ್ಷಣ' (Water, Sanitation & Hygiene - 'ಸ್ವಚ್ಛ ವಿದ್ಯಾಲಯ')** ಎಂದು ಕರೆಯಲಾಗುತ್ತದೆ. ಇದು ಒಟ್ಟಾರೆಯಾಗಿ **'ಸ್ವಚ್ಛ ವಿದ್ಯಾಲಯ'**ದ ಗುರಿಯನ್ನು ಹೊಂದಿದೆ. ಇವು 'ಸುಸ್ಥಿರ ಅಭಿವೃದ್ಧಿ ಗುರಿ'ಯ ನಿರ್ಣಾಯಕ ಭಾಗವೂ ಮತ್ತು ಕಾರ್ಯವಿಧಾನವು ಆಗಿವೆ. ಈ ಕಾರ್ಯವಿಧಾನವು ಮಕ್ಕಳ ಆರೋಗ್ಯ, ಶಿಕ್ಷಣ ಹಾಗೂ ಭಾಗವಹಿಸುವಿಕೆಯ ಹಕ್ಕನ್ನು ನೀಡುವಲ್ಲಿ ಸಹಾಯ ಮಾಡುತ್ತದೆ. ಈ ಮೂಲಕ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಸಾಧಿಸುವಲ್ಲಿ ತನ್ನ ಗಮನಾರ್ಹ ಕೊಡುಗೆಗಾಗಿ ವ್ಯಾಪಕವಾಗಿ ಗುರುತಿಸಲ್ಪಟ್ಟಿದೆ. ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ದೊರಕಿಸಿಕೊಡುವುದು, ಮಕ್ಕಳ ಮರಣದ ಪ್ರಮಾಣದಲ್ಲಿ ಇಳಿಕೆ, ಶುದ್ಧ ನೀರು ಮತ್ತು ನೈರ್ಮಲ್ಯದ ಪ್ರಗತಿ, ಲಿಂಗ ಸಮಾನತೆಗೆ ಪ್ರೋತ್ಸಾಹ ಇವೆಲ್ಲಕ್ಕೂ ಈ ಕಾರ್ಯವಿಧಾನದ ಕೊಡುಗೆಯಿದೆ. ನೀರು, ನೈರ್ಮಲ್ಯ ಮತ್ತು ಆರೋಗ್ಯ ಶಿಕ್ಷಣವು ಶಾಲೆಗಳಲ್ಲಿ ನೈರ್ಮಲ್ಯೀಕರಣ ಮತ್ತು ಆರೋಗ್ಯದ ಮಟ್ಟವನ್ನು ಸುಧಾರಿಸುವ ಮೂಲಕ ಗುಣಮಟ್ಟದ ಶಿಕ್ಷಣಕ್ಕೆ ದಾರಿ ಮಾಡಿಕೊಡುವುದಲ್ಲದೆ, ಶಾಲೆಗಳಲ್ಲಿ ಸುರಕ್ಷಿತ, ಶುದ್ಧ ನೀರು ಮತ್ತು ನೈರ್ಮಲ್ಯೀಕರಣ ಸೇವೆಗಳಿಗೆ ನ್ಯಾಯಸಮ್ಮತ, ಸಮರ್ಥನೀಯ ಮಾರ್ಗಕ್ಕೆ ಸ್ಥಳೀಯ ಮತ್ತು ರಾಷ್ಟ್ರೀಯ ಮಧ್ಯಸ್ಥಿಕೆಯ ಬೆಂಬಲವನ್ನು ಒದಗಿಸುತ್ತದೆ.

2014, ಆಗಸ್ಟ್ 15ರ 68ನೇ ಸ್ವಾತಂತ್ರೋತ್ಸವದ ದಿನದಂದು ಭಾರತದ ಪ್ರಧಾನಿಯವರು ಕೆಂಪುಕೋಟೆಯ ವೇದಿಕೆಯ ಮೇಲಿನಿಂದ ದೇಶವನ್ನುದ್ದೇಶಿಸಿ ಮಾತನಾಡುತ್ತಾ – 'ನಾನು ಇಂದು ಈ ಘಳಿಗೆಯಲ್ಲಿ ಒಂದು ಹೊಸ ಆರಂಭಕ್ಕೆ ನಾಂದಿ ಹಾಡಲಿಚ್ಛಿಸುತ್ತಿದ್ದೇನೆ. ಅದೇನೆಂದರೆ ದೇಶದ ಎಲ್ಲಾ ಶಾಲೆಗಳು ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯದೊಡಗೂಡಿ ಶೌಚಾಲಯವನ್ನು ಹೊಂದಿರಬೇಕು. ಆಗ ನಮ್ಮ ಹೆಣ್ಣುಮಕ್ಕಳು ಶಾಲೆಯನ್ನು ಅರ್ಧಕ್ಕೆ ಬಿಡಬೇಕಾಗುವುದಿಲ್ಲ. ಶೌಚಾಲಯವನ್ನು ಒದಗಿಸಲು ಸರ್ಕಾರವು ತನ್ನ ಆಯವ್ಯಯವನ್ನೇ ಬಳಸಿಕೊಳ್ಳಬೇಕು. ಇದೇ ಘಳಿಗೆಯಲ್ಲಿ ನಾನು ಸಾಂಸ್ಥಿಕ ವಲಯಕ್ಕೆ 'ಸಾಂಸ್ಥಿಕ ಸಾಮಾಜಿಕ




ಜವಾಬ್ದಾರಿ'ಯಡಿಯಲ್ಲಿ ತಮ್ಮದೇ ಖರ್ಚಿನಲ್ಲಿ ಶಾಲೆಗಳಲ್ಲಿ ಶೌಚಾಲಯ ನಿರ್ಮಿಸಿಕೊಡುವ ಕುರಿತು ಯೋಚಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ' ಎಂದು ಹೇಳುವ ಮೂಲಕ ಪ್ರಧಾನಿಯವರು ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣಕ್ಕೆ ಒಂದು ವರ್ಷದ ಗುರಿಯನ್ನು ನಿಗದಿಪಡಿಸಿದರು. ಶೌಚಾಲಯದ ಮೂಲಭೂತ ಸೌಕರ್ಯದ ಪರಿಭಾಷೆಯಲ್ಲಿ ಗುರಿಯ ಸಾಧನೆಯು ಕಾರ್ಯಕ್ಷಮತೆ ಮತ್ತು ಉಪಯುಕ್ತತೆಯ ಖಚಿತತೆಗೆ ಹಾಗೂ ಇನ್ನಷ್ಟು ಕಾರ್ಯಕ್ಕೆ ಪ್ರೇರೇಪಣೆಯನ್ನು ನೀಡಿದೆ. ಹೀಗೆ ಪ್ರಧಾನಿಯವರು **'ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯಕ್ಕೆ ಹೆಚ್ಚಿನ ಆದ್ಯತೆ'** ನೀಡುವುದಾಗಿ ಘೋಷಿಸಿದ ಘಳಿಗೆಯನ್ನು ಶಾಲೆಗಳಲ್ಲಿ 'ನೀರು, ನೈರ್ಮಲ್ಯ ಮತ್ತು ಆರೋಗ್ಯ ಶಿಕ್ಷಣ ('ಸ್ವಚ್ಛ ವಿದ್ಯಾಲಯ')' ಅಂದರೆ **'ಸ್ವಚ್ಛ ವಿದ್ಯಾಲಯ'** ಕಾರ್ಯಕ್ರಮದ ನಿರ್ಣಾಯಕ ಘಳಿಗೆ ಎನ್ನಬಹುದು.

## ಗುಣಮಟ್ಟದ ಕಾರ್ಯವಿಧಾನಗಳು

2014ರಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು **'ಸ್ವಚ್ಛ ಭಾರತ–ಸ್ವಚ್ಛ ವಿದ್ಯಾಲಯ (ಎಸ್‌ಬಿಎಸ್‌ವಿ)'** ಉಪಕ್ರಮದಡಿಯಲ್ಲಿ ಭಾರತದ ಎಲ್ಲ ಶಾಲೆಗಳಲ್ಲೂ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯದ ನಿರ್ಮಾಣವನ್ನು ಖಾತ್ರಿಪಡಿಸಿತು. ಅಲ್ಲದೇ ಈ ಉಪಕ್ರಮವು ಮಕ್ಕಳಿಗೆ ಶಾಲೆಗಳಲ್ಲಿ ಹಾಗೂ ತಮ್ಮ ನಡಾವಳಿಗಳಲ್ಲಿ ಸುರಕ್ಷಿತ ಹಾಗೂ ಸೂಕ್ತ ಆರೋಗ್ಯಪಾಲನೆಯ ಅಭ್ಯಾಸದ ರೂಢಿಯ ಉತ್ತೇಜನಕ್ಕೆ ಒತ್ತು ನೀಡಿತು.

## ಭಾರತದಲ್ಲಿ ಸ್ವಚ್ಛ ವಿದ್ಯಾಲಯ ಕಾರ್ಯಕ್ರಮದ ಪಯಣ


2014ರಲ್ಲಿ ಶಾಲೆಗಳಲ್ಲಿ ಬಾಲಕ ಮತ್ತು ಬಾಲಕಿಯರಿಗಾಗಿ ಪ್ರತ್ಯೇಕ ಶೌಚಾಲಯಗಳಿಗೆ ಗೌರವಾನ್ವಿತ ಪ್ರಧಾನಿಯವರಿಂದ ಹೆಚ್ಚಿನ ಆದ್ಯತೆ. ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ಸ್ವಚ್ಛ ಭಾರತ–ಸ್ವಚ್ಛ ವಿದ್ಯಾಲಯ ಉಪಕ್ರಮದ ಆರಂಭ. 2015ರಲ್ಲಿ ಎಲ್ಲ ಸರ್ಕಾರೀ ಶಾಲೆಗಳಲ್ಲಿ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳ ಪೂರೈಕೆಯ ಗುರಿಯ ಸಾಧನೆ.

## 2016ರಲ್ಲಿ ಸ್ವಚ್ಛ ವಿದ್ಯಾಲಯ ಪುರಸ್ಕಾರಕ್ಕೆ ಮುನ್ನುಡಿ

2016 ಭಾರತದ ಶಾಲೆಗಳಲ್ಲಿನ 'ನೀರು, ನೈರ್ಮಲ್ಯೀಕರಣ ಹಾಗೂ ಆರೋಗ್ಯ ಶಿಕ್ಷಣ' ಕಾರ್ಯಕ್ರಮಕ್ಕೆ ಒಂದು ಮಹತ್ವದ ವರ್ಷ. ಶಾಲೆಗಳಲ್ಲಿ ನೈರ್ಮಲ್ಯೀಕರಣಕ್ಕೆ ಶ್ರೇಷ್ಠಸ್ಥಾನವನ್ನು ಗುರುತಿಸಲು ಹಾಗೂ ಅದನ್ನು ಆಚರಿಸಲು ಭಾರತ ಸರ್ಕಾರದ 'ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ'ಯು 'ಸ್ವಚ್ಛ ವಿದ್ಯಾಲಯ ಪುರಸ್ಕಾರ' 2016–17ನ್ನು ಆರಂಭಿಸಿತು. ಯುನಿಸೆಫ್ ಮತ್ತು ಭಾರತೀಯ ಆಡಳಿತಾತ್ಮಕ ಸಿಬ್ಬಂದಿ ಕಾಲೇಜಿನ ತಾಂತ್ರಿಕ ಮತ್ತು ಜ್ಞಾನದ ಆಧಾರದಿಂದ ಆರಂಭಿಸಿದ 'ಸ್ವಚ್ಛ ವಿದ್ಯಾಲಯ ಪುರಸ್ಕಾರ'ವು ಈ ದಿಸೆಯಲ್ಲಿ ಒಂದು ಮಹತ್ವದ ಹೆಜ್ಜೆ. ಈ ಪುರಸ್ಕಾರದಿಂದ ಶಾಲೆಯಲ್ಲಿ ಸ್ವಚ್ಛ ವಿದ್ಯಾಲಯ ಕಾರ್ಯಕ್ರಮಕ್ಕೆ ಒಂದು ಮಾನದಂಡವನ್ನು ನಿಗದಿ ಮಾಡಿದಂತಾಯಿತು. '5 ನಕ್ಷತ್ರಗಳ (ಫೈವ್ ಸ್ಟಾರ್) ರೇಟಿಂಗ್'ನ್ನು ಪ್ರತಿ ಶಾಲೆಯವರೂ 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದ ಸ್ವಯಂ–ಮೌಲ್ಯಮಾಪನವನ್ನು ಮಾಡಿಕೊಂಡು, ಆ ದಿಸೆಯತ್ತ ಇನ್ನಷ್ಟು ಪ್ರಗತಿಗೆ ದಾರಿ

ಕಂಡುಕೊಳ್ಳಲು ಅನುಕೂಲವಾದಂತಾಯಿತು. ಇದು ಶಾಲೆ, ಜಿಲ್ಲೆ, ರಾಜ್ಯ/ಕೇಂದ್ರಾಡಳಿತ ಪ್ರದೇಶ ಮಟ್ಟದಲ್ಲಿ ಅವರ ಸ್ವಚ್ಛ ವಿದ್ಯಾಲಯ ಸೂಚ್ಯಾಂಕಗಳ ಅನುಕರಣೀಯ ಕಾರ್ಯಕ್ಷಮತೆಯನ್ನು ಗುರುತಿಸಿ ಗೌರವಿಸುತ್ತದೆ; ಇಲ್ಲಿ ಸ್ವಚ್ಛ ವಿದ್ಯಾಲಯ ಸೂಚ್ಯಾಂಕಗಳಾಗಿ ನೀರು, ಶೌಚಾಲಯ, ಸೋಪಿನಿಂದ ಕೈ ತೊಳೆಯುವುದು, ಗುಣಮಟ್ಟದ ಕಾರ್ಯಾವಿಧಾನ ಮತ್ತು ನಿರ್ವಹಣೆ ಹಾಗೂ ನಡವಳಿಕೆಯಲ್ಲಿ ಬದಲಾವಣೆ ಮತ್ತು ಸಾಮರ್ಥ್ಯವನ್ನು ಬೆಳೆಸುವುದು ಇವುಗಳನ್ನು ಪರಿಗಣಿಸಲಾಗುತ್ತದೆ.

ಸ್ವಚ್ಛವಿದ್ಯಾಲಯ ಪುರಸ್ಕಾರದ ಇನ್ನೊಂದು ಲಾಭವೆಂದರೆ, ಈ ಪುರಸ್ಕಾರಕ್ಕಾಗಿ ರಾಜ್ಯ, ಜಿಲ್ಲೆ, ಹೋಬಳಿ ಮತ್ತು ಶಾಲಾಮಟ್ಟದಲ್ಲಿ ಗುರುತಿಸಬೇಕಾದ ಅಗತ್ಯವಿರುವುದರಿಂದಾಗಿ ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಧ್ಯಮ ಶಿಕ್ಷಾ ಅಭಿಯಾನದ ಅಧಿಕಾರಿಗಳು ಶಾಲೆಯ ಉನ್ನತೀಕರಣಕ್ಕೆ ಅಗತ್ಯ ಕೌಶಲವನ್ನು ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಸರ್ಕಾರೀ ಶಾಲೆಗಳಿಗೆ ಮಾತ್ರ ಇದ್ದ 'ಸ್ವಚ್ಛ ವಿದ್ಯಾಲಯ ಪುರಸ್ಕಾರ'ವನ್ನು 2017–18ರ ಸಾಲಿನಲ್ಲಿ ಖಾಸಗೀ ವಿದ್ಯಾಲಯಗಳಾದ ಸಿಬಿಎಸ್‌ಸಿ ಪಠ್ಯಕ್ರಮದ ಶಾಲೆಗಳು, ಇನ್ನಿತರ ರಾಜ್ಯಮಂಡಳಿಗಳು ಮೊದಲಾದವುಗಳಿಗೂ ವಿಸ್ತರಿಸಲಾಗಿದೆ.





# 1. ಶಾಲೆಗಳಲ್ಲಿ 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮ

## 1.1 ಶಾಲೆಗಳಲ್ಲಿ 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದ ಮಹತ್ವ ಮತ್ತು ಅನುಕೂಲಗಳು

ಶಾಲೆಯು ವಿವಿಧ ಕೌಟುಂಬಿಕ ಹಿನ್ನೆಲೆಯುಳ್ಳ ಮಕ್ಕಳು ಒಂದೆಡೆ ಸೇರುವ ಸ್ಥಳ. ದುರದೃಷ್ಟವಶಾತ್ ಶಾಲೆಗಳು ಸಹ ಕಲುಷಿತ ನೀರು, ಆಹಾರ, ಗಾಳಿ ಮತ್ತು ಮಣ್ಣಿನ ಸಂಪರ್ಕದ ಮೂಲಕ ಸೋಂಕು ಹರಡುವಿಕೆಯ ಅನಾರೋಗ್ಯದ ಕೇಂದ್ರಗಳಾಗಿ ಪರಿವರ್ತಿತಗೊಳ್ಳಬಹುದು. ಜಗತ್ತಿನಾದ್ಯಂತ ನಡೆದ ಸಂಶೋಧನೆಗಳು ಹೇಳುವ ಪ್ರಕಾರ ಶಾಲೆಗಳಲ್ಲಿ ಸುರಕ್ಷಿತ 'ಸ್ವಚ್ಛ ವಿದ್ಯಾಲಯ' ಪ್ರಕ್ರಿಯೆಯ ಕೊರತೆಯು ರೋಗಾಣುಗಳ ಹರಡುವಿಕೆಗೆ ಕಾರಣವಾಗಿ, ಶ್ವಾಸಕೋಶದ ಸೋಂಕು ಮತ್ತು ಕರುಳಿನ ರೋಗಗಳಿಗೆ ಕಾರಣವಾಗಿದೆ. 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮವು ಇಂತಹ ಸೋಂಕುಗಳ ಹರಡುವಿಕೆಯನ್ನು ತಡೆಗಟ್ಟುವಲ್ಲಿ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಹಾಗೂ ಆ ಮೂಲಕ ಮಕ್ಕಳ ಆರೋಗ್ಯದ ಸುರಕ್ಷತೆಗೆ ನೆರವಾಗುತ್ತದೆ.

ಬಾಲ್ಯಕಾಲದ ಶಾಲಾದಿನಗಳಲ್ಲಿ ರೂಢಿಸಿಕೊಂಡ ನಡವಳಿಕೆಗಳು, ವರ್ತನೆಗಳು ವ್ಯಕ್ತಿಯ ಜೀವಮಾನವಿಡೀ ಆತನ ಜೊತೆಗಿರುತ್ತದೆ. ಈ ದೃಷ್ಟಿಯಿಂದ 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮಕ್ಕೆ ಸಂಬಂಧಿಸಿದ ತಿಳುವಳಿಕೆಯನ್ನು ಒಟ್ಟಾರೆ ಪಠ್ಯಕ್ರಮದ ಜೊತೆಗೆ ಸೇರಿಸಿ ಮಕ್ಕಳಿಗೆ ಕಲಿಸಿದರೆ ಅದು ಮಕ್ಕಳ ದಿನನಿತ್ಯದ ಸಮಗ್ರ ನೈರ್ಮಲ್ಯ ಮತ್ತು ಆರೋಗ್ಯಕರ ಅಭ್ಯಾಸದ ಮೇಲೆ ಸಕಾರಾತ್ಮಕ ಪರಿಣಾಮವನ್ನು ಬೀರುತ್ತದೆ. ಜೀವನ ಕೌಶಲ್ಯ ಆಧಾರಿತ ನೈರ್ಮಲ್ಯ ಮತ್ತು ಆರೋಗ್ಯ ಶಿಕ್ಷಣವು ನೀರು ಮತ್ತು ನೈರ್ಮಲ್ಯದ ಕುರಿತಾದ ನಡವಳಿಕೆಗಳನ್ನು ಕಲಿಯಲು ಹಾಗೂ ಇವುಗಳು ಅನಾರೋಗ್ಯಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ತಿಳಿದುಕೊಳ್ಳಲು ಅವಕಾಶವನ್ನು ಕಲ್ಪಿಸುತ್ತದೆ.

ಶಾಲೆಗಳಲ್ಲಿ 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದ ಸಂಯೋಜಿತ ಮಧ್ಯಸ್ಥಿಕೆಯಿಂದಾಗಿ ಶಾಲೆಗಳಲ್ಲಿನ ನೀರು ಸರಬರಾಜು ಮತ್ತು ನೈರ್ಮಲ್ಯದ ಮೂಲಭೂತ ಸೌಕರ್ಯದ ಅಭಿವೃದ್ಧಿಗೆ ಇನ್ನಷ್ಟು ದಾರಿ





ಮಾಡಿಕೊಟ್ಟಂತಾಯಿತು ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ, ನೈರ್ಮಲ್ಯ ಶಿಕ್ಷಣ, ಆರೋಗ್ಯ ಶಿಕ್ಷಣ, ಮೇಲ್ವಿಚಾರಣೆ ಮತ್ತು ನಿಧಿಸಂಗ್ರಹಣೆ ಹಾಗೂ ಸಂಸ್ಥೆಯ ನಿರ್ಮಾಣಕ್ಕೆ ಒಂದಷ್ಟು ಖಾತ್ರಿ ದೊರಕಿದಂತಾಯಿತು. ಸುತ್ತಮುತ್ತಲಿನ ನೈರ್ಮಲ್ಯದ ನಿರ್ವಹಣೆ, ಮಧ್ಯಾಹ್ನದ ಬಿಸಿಯೂಟದ ಕಾರ್ಯಚಟುವಟಿಕೆಯ ಖಚಿತತೆ, ವಿದ್ಯಾರ್ಥಿಗಳ ಗರಿಷ್ಠ ಹಾಜರಾತಿಯ ಪ್ರಮಾಣದ ಸಾಧನೆಗೆ ಇದು ನಿರ್ಣಾಯಕವಾಗಿದೆ.

**ಶಾಲೆಗಳು 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದ ಮಧ್ಯಸ್ಥಿಕೆಯನ್ನು ಒಳಗೊಂಡಿರಬೇಕು.**

- ಕಾರ್ಯನಿರ್ವಹಿಸುವ ಹಾಗೂ ಉತ್ತಮವಾಗಿ ನಿರ್ವಹಿಸಲ್ಪಟ್ಟ ಸುರಕ್ಷಿತ ನೀರು ಸರಬರಾಜು ಕೇಂದ್ರಗಳು, ಬಾಲಕ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಕೈ ತೊಳೆಯುವ ಸ್ಟ್ಯಾಂಡ್ ಮತ್ತು ಸೋಪು, ಕಾರ್ಯಾಚರಣೆ ಮತ್ತು ನಿರ್ವಹಣೆ, ಘನ ಮತ್ತು ದ್ರವ ತ್ಯಾಜ್ಯದ ಸುರಕ್ಷಿತ ವಿಲೇವಾರಿ ವ್ಯವಸ್ಥೆ.
- ಸುಸಂಘಟಿತ ಜೀವನಕೌಶಲ್ಯ ಶಿಕ್ಷಣ, ಪಾಲ್ಗೊಳ್ಳುವಿಕೆಯ ಬೋಧನಾ ವಿಧಾನಗಳ ಮೂಲಕ ಶಾಲಾಮಕ್ಕಳಿಗೆ ಪ್ರಮುಖ ನೈರ್ಮಲ್ಯದ ಅಭ್ಯಾಸದ ಮೇಲೆ ಹೆಚ್ಚಿನ ಗಮನ.
- 'ಸ್ವಚ್ಛ ವಿದ್ಯಾಲಯ' ನ ಸೌಲಭ್ಯದ ನಿರ್ವಹಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಕುರಿತಾಗಿ ಖಚಿತತೆಗೆ ವಿಸ್ತೃತ ಸಮುದಾಯ ಹಾಗೂ ಕುಟುಂಬಗಳ ಮೇಲೆ ಪ್ರಭಾವ ಬೀರುವುದು.


ನೀರಿನ ನೈರ್ಮಲ್ಯ ಮತ್ತು ನೈರ್ಮಲ್ಯದ ಮೇಲಿನ ಹೂಡಿಕೆಯು ಶಾಲಾಮಕ್ಕಳ ಮೇಲೆ ಹಾಗೂ ಮುಂದಿನ ಪೀಳಿಗೆಯ ಆರೋಗ್ಯದ ಮೇಲೆ ಹೂಡಿದ ಹೂಡಿಕೆಯಾಗಿದೆ. ಇದು ಮಕ್ಕಳಿಗೆ ತಮ್ಮ ಸಂಪೂರ್ಣ ಸಾಮರ್ಥ್ಯದ ಅರಿವನ್ನು ಮೂಡಿಸುವುದಕ್ಕೆ ನೆರವಾಗುವುದಲ್ಲದೆ, ಅವರು ಆರೋಗ್ಯಕರ ವಯಸ್ಕ ಜೀವನವನ್ನು ನಡೆಸುವುದಕ್ಕೆ ನೆರವಾಗುತ್ತದೆ. ಇದು ರಾಷ್ಟ್ರದ ಅಭಿವೃದ್ಧಿಗೂ ಕಾರಣವಾಗುತ್ತದೆ.

ಕೈತೊಳೆಯುವ ರೂಢಿಯಿಂದ ಭೇದಿ ಮತ್ತು ಅತಿಸಾರದ ಸಮಸ್ಯೆಯನ್ನು ಶೇ. 40ರಷ್ಟು ಕನಿಷ್ಠ ಪ್ರಮಾಣಕ್ಕಿಳಿಸಬಹುದಾದರೆ, ಶ್ವಾಸಕೋಶದ ಸೋಂಕಿಗೆ ಸಂಬಂಧಿಸಿದ ಸಮಸ್ಯೆಯನ್ನು ಶೇ. 16ಕ್ಕೆ ಇಳಿಸಬಹುದಾಗಿದೆ.

ಶಾಲೆಗಳಲ್ಲಿ ಶುದ್ಧ ನೀರು, ನೈರ್ಮಲ್ಯ, ಸ್ವಚ್ಛತೆಯು ಆರೋಗ್ಯಕರ ಹಾಗೂ ಸುರಕ್ಷಿತ ವಾತಾವರಣವನ್ನು ಸೃಷ್ಟಿಸಿ ಮಕ್ಕಳನ್ನು ಅನಾರೋಗ್ಯದಿಂದ ಕಾಪಾಡುತ್ತದೆ. ಒಂದು ಮಗುವಿನ ಆರೋಗ್ಯ ಚೆನ್ನಾಗಿದ್ದರೆ ಅದರ ಜ್ಞಾಪಕ ಶಕ್ತಿ, ಕಾರ್ಯನಿರ್ವಹಣಾ ಸಾಮರ್ಥ್ಯ, ಭಾಷೆ, ಸಮಸ್ಯೆಯನ್ನು ಬಿಡಿಸುವ ಕೌಶಲ ಹಾಗೂ ಗಮನದ ಅವಧಿಯು ಸಕಾರಾತ್ಮಕವಾಗಿ ಹೆಚ್ಚುತ್ತದೆ.

**ನೈರ್ಮಲ್ಯದಲ್ಲಿ ಸುಧಾರಣೆ**

- ಆರೋಗ್ಯದಲ್ಲಿ ಸುಧಾರಣೆ ಮತ್ತು ಅನಾರೋಗ್ಯ ಕನಿಷ್ಠಮಟ್ಟಕ್ಕೆ ಇಳಿಕೆ.
- ಹಾಜರಾತಿಯಲ್ಲಿ ಸುಧಾರಣೆ ಮತ್ತು ಶಾಲೆಯಿಂದ ಹೊರಹೋಗುವವರ ಸಂಖ್ಯೆಯಲ್ಲಿ ಇಳಿಕೆ.
- ವಿದ್ಯಾರ್ಥಿಗಳ ಕಾರ್ಯನಿರ್ವಹಣೆಯ ಮತ್ತು ಪ್ರದರ್ಶನ ಉತ್ತಮಮಟ್ಟಕ್ಕೆ.
- ಆರ್ಥಿಕ ಬೆಳವಣಿಗೆ.





ಲಿಂಗಾನುಸಾರ ಪ್ರತ್ಯೇಕ ಬಳಕೆಗೆ ಸುಲಭಸಾಧ್ಯ ಶೌಚಾಲಯಗಳ ಸೌಲಭ್ಯಗಳಿದ್ದಾಗ ವಿದ್ಯಾರ್ಥಿಗಳಿಗೆ ತಮ್ಮ ಖಾಸಗಿತನ ಹಾಗೂ ಘನತೆಯು ದೊರಕುವ ಬಗ್ಗೆ ಭರವಸೆ ಮೂಡುತ್ತದೆ. ಇದು ವಿಶೇಷ ಸೌಲಭ್ಯದ ಅಗತ್ಯವಿರುವ ಮಕ್ಕಳೂ ಸಹ ಶಾಲೆಗೆ ಬರಲು ಸಾಧ್ಯವಾಗುತ್ತದೆ. ಅದರಲ್ಲೂ ಹೆಣ್ಣುಮಕ್ಕಳು ಶಾಲಾ ದಿನಗಳಲ್ಲಿ ಋತುಮತಿಯರಾದಾಗ ಶಾಲೆಯಲ್ಲಿ ಶುದ್ಧ ಶೌಚಾಲಯ, ಶುದ್ಧ ನೀರು ಮತ್ತು ನೈರ್ಮಲ್ಯತೆ ಸೌಲಭ್ಯಗಳು ದೊರಕಿದಾಗ ಅವರು ಶಾಲೆಯನ್ನು ತಪ್ಪಿಸುವ ಅಗತ್ಯ ಬರುವುದಿಲ್ಲ. ಇದು ಅವರ ಶಾಲಾ ಹಾಜರಾತಿಯನ್ನು ಹೆಚ್ಚಿನ ಮಟ್ಟದಲ್ಲಿ ಹೊಂದಲು ಸಹಾಯಕವಾಗುತ್ತದೆ.

'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದಲ್ಲಿ ಶಿಕ್ಷಕರದು ಪ್ರಮುಖ ಪಾತ್ರ. ಅವರ ನಿಷ್ಠೆಯ ಪಾಲ್ಗೊಳ್ಳುವಿಕೆ ಮತ್ತು ಆಸಕ್ತಿಯು 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದ ಯಶಸ್ಸು ಮತ್ತು ಪೋಷಣೆಯ ನಿರ್ಣಾಯಕ ಅಂಶವಾಗಿದೆ.

'ಸ್ವಚ್ಛ ವಿದ್ಯಾಲಯ' ಶಾಲೆಯಲ್ಲಿನ ಗುಣಮಟ್ಟದ ಕಾರ್ಯವಿಧಾನ ಮತ್ತು ನಿರ್ವಹಣೆಯಾಗಿದ್ದು, ಇದು ಶಾಲೆಯಲ್ಲಿ, ಮನೆಯಲ್ಲಿ, ಸಮಾಜದ ಸಮುದಾಯದಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಜೀವನಮಟ್ಟವನ್ನು ಸುಧಾರಿಸುವುದಕ್ಕೆ ಮಕ್ಕಳು ಬಳಸಲೇಬೇಕಾದ ಜೀವನಕೌಶಲ.

ಮಕ್ಕಳು ಮಾಹಿತಿಯನ್ನು ಪಡೆದುಕೊಂಡು ಉತ್ತಮ ಆರೋಗ್ಯ ಮತ್ತು ನೈರ್ಮಲ್ಯವನ್ನು ಪಾಲಿಸುವುದರಲ್ಲಿ ಕ್ರಿಯಾಶೀಲರಾಗುತ್ತಾರೆ.





## 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮಕ್ಕಾಗಿ ಗುಣಮಟ್ಟದ ಕಾರ್ಯಾ ವಿಧಾನಗಳು

ಈ ವಿಭಾಗವು ಒಂದು ಸುಸ್ಥಿರ ಲಾಭಕ್ಕಾಗಿ ಶಾಲೆಗಳಲ್ಲಿ 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದ ಅನುಷ್ಠಾನ ಹಾಗೂ ಸುಲಭಸಾಧ್ಯ ತಿಳಿವಳಿಕೆಯ ಹಂತಹಂತದ ನೋಟವನ್ನು ಒದಗಿಸುತ್ತದೆ. **'ಗುಣಮಟ್ಟದ ಕಾರ್ಯವಿಧಾನ ಮತ್ತು ನಿರ್ವಹಣೆ (ಎಸ್‌ಓಪಿ)'** ಯು 'ಸ್ವಚ್ಛ ವಿದ್ಯಾಲಯ'ದ ಪ್ಯಾಕೇಜ್ ಆಗಿದ್ದು. ಇದು ಮಕ್ಕಳು, ಪೋಷಕರು ಹಾಗೂ ಸಮುದಾಯಗಳಿಗೆ ತಿಳಿವಳಿಕೆಯ ಸುಲಭ ಪ್ರಸರಣದ ಸುಗಮ ಅನುಸರಣೆಗೆ ನೆರವಾಗುತ್ತದೆ.

ಉತ್ತಮ ಆರೋಗ್ಯಕ್ಕೆ ಶುದ್ಧ ಹಾಗೂ ಸುರಕ್ಷಿತ ನೀರು ಅತ್ಯಗತ್ಯ. ಸಂಪೂರ್ಣ ಪರೀಕ್ಷೆ ಮತ್ತು ಸಂಸ್ಕರಣೆಯಿಂದ ನೀರನ್ನು ಮಣ್ಣು, ಗಸಿ ಹಾಗೂ ರಾಸಾಯನಿಕ ಮಾಲಿನ್ಯದಿಂದ ಶುದ್ಧ ಹಾಗೂ ಸುರಕ್ಷಿತ ಮಾಡಿಕೊಳ್ಳಬಹುದು. ಜ್ಞಾನ ಹಾಗೂ ನಿರೀಕ್ಷಿತ ಫಲಿತಾಂಶಗಳು ಈ ಕೆಳಗಿನಂತಿವೆ:

### ಸೈದ್ಧಾಂತಿಕ ಜ್ಞಾನ



- ಸಾಧ್ಯವಿದ್ದಲ್ಲೆಲ್ಲ ಸಮುದಾಯಗಳು ಸುರಕ್ಷಿತ ಮೂಲದಿಂದ ನೀರನ್ನು ಸಂಗ್ರಹಿಸಿ ಸುರಕ್ಷಿತವಾಗಿ ಶೇಖರಿಸಿಡಬೇಕು.
- ನೀರಿನ ಮೂಲವು ಸುರಕ್ಷಿತವಾಗಿಲ್ಲದಿದ್ದರೆ ನೀರನ್ನು ಕುದಿಸಿಡುವ ಮೂಲಕ, ಸೋಸುವಿಕೆಯ ಮೂಲಕ, ಸೌರ ಅಥವಾ ರಾಸಾಯನಿಕ ಸೋಂಕುನಿವಾರಕ ವಿಧಾನಗಳಾದ ಬ್ಲೀಚಿಂಗ್ ಪೌಡರ್ ಹಾಗೂ ಕ್ಲೋರಿನ್ ಟ್ಯಾಬ್ಲೆಟ್ ಬಳಕೆಯ ಮೂಲಕ ಸಂಸ್ಕರಿಸಬೇಕು.




### ನಿರೀಕ್ಷಿತ ಫಲಿತಾಂಶ

ಮೂಲವು ಸುರಕ್ಷಿತವಾಗಿಲ್ಲದಿದ್ದರೆ ಮಕ್ಕಳು ನೀರನ್ನು ಕುದಿಸುವ ಮೂಲಕ, ಫಿಲ್ಟರ್ ಮಾಡುವ ಮೂಲಕ, ಸೌರ ಅಥವಾ ರಾಸಾಯನಿಕ ಸೋಂಕುನಿವಾರಕಗಳ ಮೂಲಕ ಸಂಸ್ಕರಣೆ ಮಾಡುತ್ತಾರೆ.

### ನೀರಿನ ಸುರಕ್ಷತೆಯ ಖಚಿತತೆಗೆ ಪರಿಶೀಲನಾ ಪಟ್ಟಿ



- ನೀರಿನ ಮೂಲ ಮಾಲಿನ್ಯಮುಕ್ತವಾಗಿರಬೇಕು.
- ನೀರನ್ನು ತುಂಬಿಸಿಡುವ ಪಾತ್ರೆಗಳನ್ನು ತಿಕ್ಕಿ, ಸ್ವಚ್ಛನೀರಿನಿಂದ ತೊಳೆದು ಬಳಸುವ ಮುನ್ನ ಬಿಸಿಲಿನಲ್ಲಿಟ್ಟು ಒಣಗಿಸಿಕೊಳ್ಳಬೇಕು.
- ನೀರು ತುಂಬಿಸುವ ಪಾತ್ರೆಗಳನ್ನು ನೀರು ಸರಬರಾಜು ಮಾಡುವ ಹಾಗೂ ಬಳಸುವ ಎಲ್ಲ ಸಮಯದಲ್ಲೂ ಮುಚ್ಚಿಡಬೇಕು.
- ನೀರನ್ನು ಗಟ್ಟಿಮುಚ್ಚಳ / ಸ್ಕ್ರೂ ಕ್ಯಾಪ್‌ನೊಂದಿಗಿನ ಪಾತ್ರೆಗಳಲ್ಲಿ ಶೇಖರಿಸಬೇಕು.
- ನೀರನ್ನು ಬಳಸುವ ಮಹಿಳೆಯರು ಟ್ಯಾಪ್ ಅಥವಾ ಉದ್ದದ ಹಿಡಿಕೆಯ ಸಾಧನಗಳನ್ನು ಬಳಸಬೇಕು.






- ❖ ಸೌಟನ್ನು ಬಳಸುವ ಮೊದಲು ಕೈಗಳು ಶುದ್ಧವಾಗಿರಬೇಕು ಹಾಗೂ ಬೆರಳುಗಳನ್ನು ನೀರಿನಲ್ಲಿ ಅದ್ದಕೂಡದು.
- ❖ ಒಬ್ಬರು ಕುಡಿಯುವ ನೀರಿನ ಗ್ಲಾಸನ್ನು ಇನ್ನೊಬ್ಬರಿಗೆ ನೀಡಬಾರದು. ಅದು ಸೂಕ್ಷ್ಮಜೀವಿಗಳ ಹರಡುವಿಕೆಗೆ ಕಾರಣವಾಗಬಹುದು.
- ❖ ಶಾಲೆಗಳಲ್ಲಿ ನೀರು ಸಂಸ್ಕರಣಾ ಸಾಧನಗಳಿದ್ದರೆ ಅದರ ಸಮೀಪ ಬಳಕೆ ಮತ್ತು ಸೇವೆಯ ಸೂಚನಾಪಟ್ಟಿ ಪ್ರದರ್ಶಿಸಿಡಬೇಕು.

## ಸ್ವಚ್ಛತೆ ಹಾಗೂ ನೈರ್ಮಲ್ಯಕ್ಕಾಗಿ ಗುಣಮಟ್ಟದ ಕಾರ್ಯವಿಧಾನ ಮತ್ತು ನಿರ್ವಹಣೆ (SOP)

ನೈರ್ಮಲ್ಯದ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವದಕ್ಕಾಗಿ ಮಕ್ಕಳಲ್ಲಿ ಆಗುವ ಅವರ ನಡವಳಿಕೆಯಲ್ಲಿನ ಬದಲಾವಣೆಯು ಕುಟುಂಬ ಮತ್ತು ಸಮುದಾಯದ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಹಾಗೂ ಅವರ ಜೀವನಮಟ್ಟದಲ್ಲಿ ಸುಧಾರಣೆ ತರಲು ಅದು ತನ್ನದೇ ಆದ ಕೊಡುಗೆಯನ್ನು ನೀಡುತ್ತದೆ. ಮಕ್ಕಳಿಗೆ ನೀಡುವ ಪರಿಣಾಮಕಾರಿ ನೈರ್ಮಲ್ಯ ಶಿಕ್ಷಣವು ಜೀವನಕೌಶಲ ಶಿಕ್ಷಣವಾಗಿದ್ದು, ಇದು ಕಳಪೆನೈರ್ಮಲ್ಯದ ಆಚರಣೆಗಳಿಂದ ಉಂಟಾಗುವ ಆರೋಗ್ಯಸಂಬಂಧಿ ಸಮಸ್ಯೆಗಳ ಕುರಿತಾದ ವಾಸ್ತವಿಕ ಮಾಹಿತಿಯನ್ನು ಮೀರಿ ಹೆಚ್ಚಿನ ಮಾಹಿತಿ ಒದಗಿಸುತ್ತದೆ. ಜೀವನಕೌಶಲ ವಿಧಾನವು ಉಪನ್ಯಾಸ ಮಾದರಿಯ ಬೋಧನೆಗಿಂತ ಸಂವಹನ ಸಂಪರ್ಕದ ಮೂಲಕ ಮಕ್ಕಳಲ್ಲಿ ನೈರ್ಮಲ್ಯದ ಕುರಿತಾದ ಕಾಳಜಿಯನ್ನು ಮೂಡಿಸುವುದರ ಮೇಲೆ ಗಮನ ಹರಿಸುತ್ತದೆ.

ವೈಯಕ್ತಿಕ ನೈರ್ಮಲ್ಯಕ್ಕೆ ಸಂಬಂಧಿಸಿ ಉತ್ತಮ ಅಭ್ಯಾಸವನ್ನು ಬೆಳೆಸುವ ಮಾರ್ಗವೆಂದರೆ ಮುಂಜಾನೆಯ ಶಾಲಾ ಪ್ರಾರ್ಥನಾ ಸಮಯದಲ್ಲಿ ಗುಂಪು ಚರ್ಚೆ ಹಾಗೂ ಉಪನ್ಯಾಸಗಳನ್ನು ನೀಡುವುದು. ಇದರ ಜೊತೆಗೆ ಪ್ರತಿ ಮಗುವಿನ ಅದರಲ್ಲೂ ವಿಶೇಷವಾಗಿ ತರಗತಿಯ ಮಂತ್ರಿಮಂಡಳದ ಸದಸ್ಯರನ್ನು ತೊಡಗಿಸುವ ಮೂಲಕ ಪ್ರತಿ ಮಗುವಿನ ನೈರ್ಮಲ್ಯದ ಕುರಿತಾದ ಅಭ್ಯಾಸಗಳ ಮೇಲ್ವಿಚಾರಣೆ ನಡೆಸುವುದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಹಾಗೂ ವೈಯಕ್ತಿಕ ನೈರ್ಮಲ್ಯಕ್ಕಾಗಿ ವಾರಕ್ಕೊಂದು ತರಗತಿಯನ್ನು ಇಡುವುದನ್ನು ಕಡ್ಡಾಯ ಮಾಡಬೇಕು; ಇದರಲ್ಲಿ ವೈಯಕ್ತಿಕ ನೈರ್ಮಲ್ಯಕ್ಕೆ ಸಂಬಂಧಿಸಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಬೇಕು. ಹಾಗೂ ಈ ಮನೋಭಾವವು ಮಕ್ಕಳಲ್ಲಿ ನೈರ್ಮಲ್ಯದ ಕುರಿತಾದ ನಡವಳಿಕೆಗಳನ್ನು ರೂಢಿಸುವಂತಿರಬೇಕು.

## ವೈಯಕ್ತಿಕ ನೈರ್ಮಲ್ಯದ ಪರಿಶೀಲನಾಪಟ್ಟಿ


- ❖ ಮಲಮೂತ್ರ ವಿಸರ್ಜನೆಗೆ ಶೌಚಾಲಯ ಬಳಸುವುದು
- ❖ ಮಲಮೂತ್ರ ವಿಸರ್ಜನೆಯ ಬಳಿಕ ಶೌಚಾಲಯಕ್ಕೆ ನೀರು ಹಾಕುವುದು ಅಥವಾ ಫ್ಲಶ್‌ಗುಂಡಿ ಒತ್ತಿ ನೀರು ಹಾಕುವುದು.
- ❖ ಮಲಮೂತ್ರ ವಿಸರ್ಜನೆಯ ಬಳಿಕ ಸೋಪಿನಿಂದ ಕೈ ತೊಳೆಯುವುದು.
- ❖ ತಿನ್ನುವ ಮುನ್ನ, ಪ್ರಾಣಿಗಳೊಂದಿಗೆ ಆಟವಾಡಿದ ಬಳಿಕ, ಆಟದ ಮೈದಾನದಲ್ಲಿ ಆಡಿದ ಬಳಿಕ, ಮಕ್ಕಳ ಮಲಮೂತ್ರ ಸ್ವಚ್ಛಗೊಳಿಸಿದ ಬಳಿಕ ಸೋಪಿನಿಂದ ಕೈತೊಳೆಯುವುದು.




- ಬೂಟುಗಳನ್ನು ಅಥವಾ ಚಪ್ಪಲಿಗಳನ್ನು ಧರಿಸುವುದು.
- ಉಗುರುಗಳನ್ನು ಕತ್ತರಿಸುವುದು.
- ಹಲ್ಲುಗಳನ್ನು ಮುಂಜಾನೆ ಮತ್ತು ರಾತ್ರಿ ಮಲಗುವ ಮುನ್ನ ಉಜ್ಜುವುದು.
- ಸೋಪನ್ನು ಬಳಸಿ ದಿನಾಲೂ ಸ್ನಾನ ಮಾಡುವುದು.
- ಕೊನೇಪಕ್ಷ ವಾರಕ್ಕೊಮ್ಮೆಯಾದರೂ ತಲೆಸ್ನಾನ ಮಾಡಿ ಕೂದಲನ್ನು ಸ್ವಚ್ಛಗೊಳಿಸುವುದು.

**ನೈರ್ಮಲ್ಯ ಶಿಕ್ಷಣವನ್ನು ನೀಡುವಲ್ಲಿ ಹೆಚ್ಚು ಪರಿಣಾಮಕಾರಿ ಎಂದು ಪರಿಗಣಿಸಲಾಗುವ ಬೋಧನಾ ವಿಧಾನಗಳು ಕೆಳಕಂಡಂತಿವೆ:**

- ಕಥೆಗಳನ್ನು ಕೇಳುವುದು, ಓದುವುದು ಹಾಗೂ ಹೇಳುವುದು.
- ಕಥೆಗಳನ್ನು ಕೇಳುವುದು, ಓದುವುದು ಹಾಗೂ ವಿಶ್ಲೇಷಿಸುವುದು ಹಾಗೂ ಹೇಳುವುದು.
- ನಾಟಕಗಳನ್ನು ಪ್ರದರ್ಶಿಸುವುದು, ನಾಟಕದಲ್ಲಿ ಪಾತ್ರ ಮಾಡುವುದು, ಮಕ್ಕಳ ನಾಟಕ, ಕೌಶಲ ಪ್ರದರ್ಶನ.
- ಕವಿತೆಗಳನ್ನು ವಾಚನ, ಹಾಡುವುದು.
- ರಸಪ್ರಶ್ನೆಗಳ ಮೂಲಕ.
- ಕಥೆಗಳನ್ನು ಬರೆಯುವುದು ಮತ್ತು ವಿಶ್ಲೇಷಿಸುವುದು.
- ನಾಟಕ ಪ್ರದರ್ಶನ/ಕಿರುಪಾತ್ರ ನಾಟಕಗಳ ನಿರ್ವಹಣೆ.
- ಸಂಭಾಷಣೆ ಮತ್ತು ಚರ್ಚೆ.
- ಗುಂಪು ಮತ್ತು ತರಗತಿ ಚರ್ಚೆ.




- ವಿವಿಧ ರೀತಿಯ ಗೊಂಬೆ ಪ್ರದರ್ಶನಗಳನ್ನು ವೀಕ್ಷಿಸುವುದು ಮತ್ತು ಭಾಗವಹಿಸುವುದು.
- ಹಾಡುವುದು ಮತ್ತು ನೃತ್ಯ ಮಾಡುವುದು.
- ಹಾಡುವುದು ಮತ್ತು ನರ್ತಿಸುವುದು; ಚಿತ್ರಕಲೆ ಮತ್ತು ವರ್ಣಚಿತ್ರಕಲೆ.
- ರೇಖಾಚಿತ್ರ, ಚಿತ್ರಕಲೆ, ವರ್ಣಚಿತ್ರ.
- ವಿವಿಧ ಬಗೆಯ ಮಾದರಿಗಳನ್ನು ತಯಾರಿಸುವುದು.
- ಚರ್ಚಾಕೂಟ ನಡೆಸುವುದು.
- ಸಂಭಾಷಣೆ ಮತ್ತು ಚರ್ಚೆ.
- ರೇಖಾಚಿತ್ರ ಮತ್ತು ಚಿತ್ರಕಲೆ.
- ಭಾಷೆ ಮತ್ತು ಗಣಿತದ ಆಟಗಳು.
- ಜೇಡಿಮಣ್ಣಿನೊಂದಿಗೆ ಆಡುವುದು.
- ಸಂಯೋಜನೆ ಮತ್ತು ಸೃಜನಾತ್ಮಕ ಬರವಣಿಗೆ.
- ಶಾಲೆ/ಸಮುದಾಯ ಅವಲೋಕನಗಳು ಮತ್ತು ನಕಾಶೆ ಬಿಡಿಸುವುದು ಅಥವಾ ವಿಹಾರ.
- ಸರಳವಾದ ನೈರ್ಮಲ್ಯ ಚಟುವಟಿಕೆ ನಡೆಸುವುದು.
- ಚರ್ಚಾಕೂಟಗಳನ್ನು ಏರ್ಪಡಿಸುವುದು.
- ರಸಪ್ರಶ್ನೆ ಮತ್ತು ಒಗಟುಗಳು.
- ಪೋಷಕರು ಮತ್ತು ಕುಟುಂಬದ ಸದಸ್ಯರಿಗೆ ಒಪ್ಪಿಸುವುದು.
- ಮನೆಯವರು ಮತ್ತು ಕುಟುಂಬ ಸದಸ್ಯರೊಂದಿಗೆ ಸಮಾಲೋಚನೆ ಮತ್ತು ನಡವಳಿಕೆಯ ವಿಶ್ಲೇಷಣೆ.








## ಆಹಾರ ನೈರ್ಮಲ್ಯ

ಪ್ರತಿಯೊಬ್ಬರೂ ಉತ್ತಮ ಆರೋಗ್ಯಕ್ಕಾಗಿ ಮತ್ತು ಉಳಿವಿಗಾಗಿ ಆರೋಗ್ಯಕರ ಆಹಾರವನ್ನು ಸೇವಿಸುವುದು ಅವಶ್ಯಕ. ಕಲುಷಿತ ಆಹಾರ (ವಿಷಪೂರಿತ ಆಹಾರ ಎಂದೂ ಕರೆಯಲ್ಪಡುತ್ತದೆ) ಸೇವನೆಯು ಅತಿಸಾರ ರೋಗಗಳ ಮೂಲವಾಗಬಹುದು. ಜ್ಞಾನ ಹಾಗೂ ನಿರೀಕ್ಷಿತ ಫಲಿತಾಂಶಗಳು ಈ ಕೆಳಗಿನಂತಿವೆ.


## ಸೈದ್ಧಾಂತಿಕ ಜ್ಞಾನ

ಆಹಾರನೈರ್ಮಲ್ಯ ಮತ್ತು ರೋಗಗಳು ಪರಸ್ಪರ ಸಂಬಂಧವನ್ನು ಹೊಂದಿವೆ. ಆಹಾರವನ್ನು ಸೂಕ್ತರೂಪದಲ್ಲಿ ಸಂಗ್ರಹಿಸಬೇಕು. ಆಹಾರವು ಹಳಸಿದಾಗ ಅದನ್ನು ಗುರುತಿಸಬಹುದಾದ ಸೂಚನೆಗಳು ಇರುತ್ತವೆ.


## ನಿರೀಕ್ಷಿತ ಫಲಿತಾಂಶ


ಮಕ್ಕಳಿಗೆ ಆಹಾರವನ್ನು ಸೂಕ್ತವಾಗಿ ಸಂಗ್ರಹಿಸುವುದು ಹೇಗೆ ಮತ್ತು ಹಳಸಿದ ಆಹಾರದ ಸಾಮಾನ್ಯ ಸೂಚನೆಗಳು ತಿಳಿದಿರಬೇಕು. ಕಚ್ಚಾ ಹಣ್ಣುಗಳು, ತರಕಾರಿಗಳು, ಮಾಂಸ, ಕೋಳಿ ಮತ್ತು ಮೀನಿನ ಆಹಾರವನ್ನು ಸೂಕ್ತವಾಗಿ ಸಂಸ್ಕರಿಸುವುದನ್ನು ಮತ್ತು ಸಂಗ್ರಹಿಸುವುದನ್ನು ಹೇಳಿಕೊಡಬೇಕು.

## ಆಹಾರ ಸುರಕ್ಷತೆಯ ಖಾತರಿಪಟ್ಟಿ



- ಆಹಾರದ ತಯಾರಿಕೆ ಮತ್ತು ಸಿದ್ಧತೆಗಳಲ್ಲಿ ಅತಿಹೆಚ್ಚು ಸ್ವಚ್ಛತೆಯನ್ನು ಕಾಪಾಡಬೇಕು.
- ಆಹಾರ ತಯಾರಿಕೆಯ ಜವಾಬ್ದಾರಿ ಹೊತ್ತ ಎಲ್ಲರೂ ಸ್ವಚ್ಛವಾಗಿರಬೇಕು, ಶುಚಿಯಾದ ಬಟ್ಟೆ ಧರಿಸಬೇಕು, ಉಗುರಗಳನ್ನು ಕತ್ತರಿಸಿಕೊಂಡಿರಬೇಕು, ಕೆಲಸವನ್ನು ಆರಂಭಿಸುವ ಮುನ್ನ, ಆಹಾರ ಮುಟ್ಟಿದ ಬಳಿಕ, ಕಚ್ಚಾ ಅಥವಾ ಕಲುಷಿತ ಆಹಾರವನ್ನು ಮುಟ್ಟಿದ





ಬಳಿಕ, ಶೌಚಾಲಯದ ಬಳಕೆಯ ನಂತರ ಸಾಬೂನನ್ನು ಬಳಸಿ ಕೈತೊಳೆಯಬೇಕು.

- ಅಡುಗೆಯುವರು ಅಥವಾ ಸಹಾಯುಕರು ಆಹಾರದೊಡನೆ ಪ್ರಸರಣವಾಗುವಂತಹ ರೋಗಗಳಾದ ಅತಿಸಾರ, ವಾಂತಿ ಮತ್ತು ಸೋಂಕು ರೋಗಗಳಾದ ಚರ್ಮದ ಸೋಂಕು, ಕಾಮಾಲೆ, ಹುಣ್ಣುಗಳಂತಹ ರೋಗಗಳಿಂದ ಬಳಲುತ್ತಿದ್ದರೆ ತಮ್ಮ ಮೇಲ್ವಿಚಾರಕರಿಗೆ ಕೂಡಲೇ ತಿಳಿಸಬೇಕು.
- ಆಹಾರ ತಯಾರಿಕೆಯಲ್ಲಿ ತೊಡಗಿಕೊಂಡಿರುವಾಗ ಅಡುಗೆಯವರು, ಸಹಾಯಕರು ತಲೆ ಕೂದಲು ಮುಖ ಸ್ಪರ್ಶಿಸುವುದು ಅಥವಾ ತುರಿಸುವುದು ಮುಂತಾದವನ್ನು ಮಾಡಕೂಡದು.
- ಬ್ಯಾಕ್ಟೀರಿಯಾ ವರ್ಗಾವಣೆಯ ಮೂಲಕ ಆಹಾರ ಹಾಳಾಗುವುದನ್ನು ತಪ್ಪಿಸಲು ಅಡುಗೆಯವರು, ಸಹಾಯಕರು ಕೆಮ್ಮು, ಸೀನಿದ ನಂತರ, ಶೌಚಾಲಯ ಬಳಸಿದ ನಂತರ, ಟೆಲಿಫೋನ್ ಬಳಸಿದ ನಂತರ, ಧೂಮ್ರಪಾನ ಮುಂತಾದವುಗಳ ಬಳಿಕ ಕೈತೊಳೆದು ಮುಂದಿನ ಕಾರ್ಯ ಮಾಡಬೇಕು.

## ತ್ಯಾಜ್ಯ ನಿರ್ವಹಣೆ

ತ್ಯಾಜ್ಯ ನಿರ್ವಹಣೆಯು 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದ ಒಂದು ಅವಿಭಾಜ್ಯ ಭಾಗವಾಗಿದೆ. ಹಾಗಾಗಿ ಇದರ ನಿರ್ವಹಣೆಯ ಕುರಿತ ಸೂಕ್ತ ತಿಳಿವಳಿಕೆ ನೀಡುವುದೂ ಶಾಲಾ ಪಠ್ಯಕ್ರಮದ ಒಂದು ಭಾಗವಾಗಬೇಕು. ಘನ ತ್ಯಾಜ್ಯ, ಶೌಚಾಲಯದ ದ್ರವ ತ್ಯಾಜ್ಯ, ಅಡುಗೆಮನೆ ಮತ್ತು ನಿಂತ ನೀರು ಹೇಗೆ ಕೀಟನಿಯಂತ್ರಣದಲ್ಲಿ, ಸೊಳ್ಳೆ ಮತ್ತು ನೊಣಗಳ ಸಂತಾನಾಭಿವೃದ್ಧಿಗೆ ನೆರವಾಗುತ್ತವೆ ಇವೇ ಮೊದಲಾದ ತಿಳಿವಳಿಕೆಗಳನ್ನು ನೀಡಬೇಕು; ಜ್ಞಾನ ಹಾಗೂ ಅಭ್ಯಾಸಗಳು ಈ ಕೆಳಗಿನಂತಿವೆ.

## ಜ್ಞಾನ

3 ರೀತಿಯ ಘನತ್ಯಾಜ್ಯ ನಿರ್ವಹಣೆ.

ಕಡಿತಗೊಳಿಸಿದ್ದು– ಉತ್ಪನ್ನಗಳ ಬಳಕೆ.


ಮರುಬಳಕೆ – ಸಾಧ್ಯವಾದರೆ ಉದಾಹರಣೆಗೆ ಪ್ಲಾಸ್ಟಿಕ್.

ಮರುಬಳಕೆ – ಮರುಬಳಕೆ ಸಾಧ್ಯವಲ್ಲದಿದ್ದರೆ.

- ಘನತ್ಯಾಜ್ಯವನ್ನು ಜೈವಿಕ (ಸಾವಯವ) ಮತ್ತು ಅಜೈವಿಕ (ಅಸಾವಯವ) ಎಂದು ವಿಂಗಡಿಸಲ್ಪಡಬೇಕು. ಸಾವಯವ ತ್ಯಾಜ್ಯವು ಅಡುಗೆಮನೆಯ ಉತ್ಪಾದನೆ, ಎಲೆಯಲ್ಲಿ ಉಳಿದ ಊಟಗಳು, ಒಣ ತ್ಯಾಜ್ಯವಾದ ಪೇಪರ್, ಕಾರ್ಡ್‌ಬೋರ್ಡ್, ಎಲೆ, ಮರದ ತುಂಡುಗಳಂಥ ಶುಷ್ಕ ತ್ಯಾಜ್ಯವನ್ನು ಒಳಗೊಂಡಿರುತ್ತದೆ.

ಗೊಬ್ಬರದ ಗುಂಡಿಗಳು ಸಾವಯವ ತ್ಯಾಜ್ಯದ ವಿಲೇವಾರಿಗೆ ಸೂಕ್ತ ಪರಿಹಾರಗಳಾಗಿವೆ. ಏಕೆಂದರೆ ಈ ಚಟುವಟಿಕೆಯು ತ್ಯಾಜ್ಯಕ್ಕೆ ಮೌಲ್ಯವನ್ನು ಮಾತ್ರ ಸೇರಿಸುತ್ತದೆ, ಪ್ರತಿಯಾಗಿ ಅದನ್ನು ಗೊಬ್ಬರವಾಗಿ ಬಳಸಬಹುದು.

- ಅಜೈವಿಕ ತ್ಯಾಜ್ಯಗಳು (ಜೈವಿಕ ವಿಘಟನೀಯ ತ್ಯಾಜ್ಯವೆಂದೂ ಕರೆಯಲ್ಪಡುತ್ತದೆ) ಖನಿಜಮೂಲದ ರಾಸಾಯನಿಕಗಳಾದ ಲೋಹೀಯ ಧಾರಕಗಳು, ಬಾಟಲಿಗಳು ಮೊದಲಾದವುಗಳನ್ನು ಒಳಗೊಂಡಿರುತ್ತವೆ. ಇಂತಹ ಅಜೈವಿಕ ತ್ಯಾಜ್ಯವನ್ನು ನೈಸರ್ಗಿಕವಾಗಿ ವಿಂಗಡಿಸಲಾಗುವುದಿಲ್ಲ. ಇದರ ವಿಲೇವಾರಿಗೆ ಸೂಕ್ತ ಪರಿಹಾರವೆಂದರೆ ಮರುಬಳಕೆ ಪ್ರಕ್ರಿಯೆ; ಹಾಗಾಗಿ ಇಂತಹ ತ್ಯಾಜ್ಯಗಳನ್ನು ಮರುಬಳಕೆಗೆ ಕಳುಹಿಸಬೇಕು.
- ಅದೇ ರೀತಿ ದ್ರವ ತ್ಯಾಜ್ಯವನ್ನು ಸಹ ನಿಂತಲ್ಲೇ ಇರಲು ಬಿಡಬಾರದು; ಇದು ಆನಂತರ ರೋಗವಾಹಕಗಳ ಸಂತಾನಾಭಿವೃದ್ಧಿ ತಾಣವಾಗಿ ಪರಿಣಮಿಸುತ್ತದೆ. ಸೆಪ್ಟಿಕ್ ಟ್ಯಾಂಕ್ ಅಥವಾ ಲೀಚ್ ಹೊಂಡಗಳಂತಹ ಸೂಕ್ತ ವಿಲೇವಾರಿ ಮೂಲಕ ದ್ರವ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕು.
- ಘನ ತ್ಯಾಜ್ಯವು ಸಂಗ್ರಹಿಸಲ್ಪಟ್ಟ ಮೂಲದಲ್ಲೇ ವಿಂಗಡಿಸಲ್ಪಡಬೇಕು. ಸಾವಯವ ತ್ಯಾಜ್ಯವನ್ನು ನೈಸರ್ಗಿಕವಾಗಿ ವಿಘಟಿಸಲ್ಪಡುವಂತಹ ಹೊಂಡಗಳಲ್ಲೇ ಹಾಕಬೇಕು ಮತ್ತು ಅಜೈವಿಕ ತ್ಯಾಜ್ಯವನ್ನು ಮರುಬಳಕೆಯ ಪ್ರಕ್ರಿಯೆಗೆ ಕಳುಹಿಸಬೇಕು.
- ನೀರನ್ನು ನಿಲ್ಲಲು ಅವಕಾಶ ಕೊಡಬಾರದು ಮತ್ತು ಸೂಕ್ತ ಕೊಳವೆಗಳ ಮೂಲಕ ಹರಿಯಲು ಬಿಡಬೇಕು.
- ಸಂಸ್ಕರಿಸದ ದ್ರವತ್ಯಾಜ್ಯವು ಕಾಲರಾ, ಹೆಪಟೈಟಿಸ್ ನಂತಹ ರೋಗಗಳಿಗೆ ಕಾರಣವಾಗಬಹುದು.
- ಅಸಮರ್ಪಕ ಘನತ್ಯಾಜ್ಯ ವಿಲೇವಾರಿ – ಅನಗತ್ಯವಾದ ಜಮೀನು ಅಥವಾ ಜಲಮೂಲಗಳಿಗೆ ಸೇರಿ ತ್ಯಾಜ್ಯದ್ವೀಪ ನಿರ್ಮಾಣವಾಗಿ ಪರಿಸರಕ್ಕೆ ಹಾನಿಯನ್ನುಂಟುಮಾಡುತ್ತದೆ.




## ಮುಟ್ಟಿನ ಆರೋಗ್ಯ ನಿರ್ವಹಣೆ:

ಹದಿಹರೆಯದ ಹುಡುಗಿಯರಿಗೆ ಮುಟ್ಟಿನ ಅವಧಿಯಲ್ಲಿ ಯಾವುದೇ ಸೋಂಕಿಗೆ ಒಳಗಾದಂತೆ ಹೇಗೆ ಅದನ್ನು ನಿರ್ವಹಿಸಬೇಕು ಎಂಬುದನ್ನು ಕಲಿಸಿಕೊಡಬೇಕು; ಇದೇ ಮುಟ್ಟಿನ ಆರೋಗ್ಯ ನಿರ್ವಹಣೆ.

ಜ್ಞಾನ ಮತ್ತು ನಿರಿಕ್ಷಿತ ಫಲಿತಾಂಶವು ಈ ಕೆಳಗಿನಂತಿರುತ್ತದೆ.

## ಜ್ಞಾನ

ಮುಟ್ಟಿನ ರಕ್ತವು ಅಶುಚಿ, ಅನಾರೋಗ್ಯಕರ, ಕೊಳಕು ಅಲ್ಲ. ಇದು ಗರ್ಭಾಶಯದ ಒಳಪದರದಿಂದ ಹೊರಬರುವ ರಕ್ತ ಮತ್ತು ಅಂಗಾಂಶವಷ್ಟೆ. ಈ ಅವಧಿಯಲ್ಲಿ ಬರುವ ಕೆಟ್ಟ ವಾಸನೆಯು ಜನನಾಂಗಗಳ ಅಶುಚಿಯಿಂದ ಬರುವಂಥದ್ದು.




**ಅಭ್ಯಾಸ**

ಹದಿಹರೆಯದ ಹುಡುಗಿಯರು ಈ ಅವಧಿಯಲ್ಲಿ ವೈಯಕ್ತಿಕ ನೈರ್ಮಲ್ಯದ ಹಾಗೂ ಆಗ ಬರುವ ತ್ಯಾಜ್ಯದ ವಿಲೇವಾರಿಯ ಕುರಿತಾದ ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಳ್ಳಬೇಕು.

## 3.6 ಪಾಲಕರು & ಸಮುದಾಯದ ಪಾತ್ರಗಳು ಮತ್ತು ಹೊಣೆಗಾರಿಕೆಗಳು

ಪಾಲಕರು ಮತ್ತು ಸಮುದಾಯದ ಸದಸ್ಯರು ಶಾಲೆಯನ್ನು ಸ್ವಚ್ಛವಾಗಿ, ಸುರಕ್ಷಿತವಾಗಿ ಮತ್ತು ಆರೋಗ್ಯಕರವಾಗಿ ಇಟ್ಟುಕೊಳ್ಳುವುದರಲ್ಲಿ ಹಾಗೂ ಮಕ್ಕಳನ್ನು ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಪ್ರೋತ್ಸಾಹಿಸುವುದರಲ್ಲಿ ಮಹತ್ತರ ಪಾತ್ರವಹಿಸಬಹುದಾಗಿದೆ. ಗ್ರಾಮೀಣ ಹಾಗೂ ನಗರದ ಕೊಳಚೆ ಪ್ರದೇಶಗಳ ಶಾಲೆಗಳು ಬಹಳಷ್ಟು ವೇಳೆ ಚುನಾವಣಾ ಬೂತಿಂಗ್, ನೆರೆ, ಬಿರುಗಾಳಿಯ ವೇಳೆಗೆ ತಾತ್ಕಾಲಿಕ ವಸತಿಗಳ ರೂಪದಲ್ಲಿ ಸಮುದಾಯ ಹಾಗೂ ಸರ್ಕಾರದ ಕಾರ್ಯಗಳಿಗೆ ಬಳಕೆಯಾಗುತ್ತದೆ. ಇಂತಹ ವೇಳೆಯಲ್ಲಿ ಶಾಲೆಯ ಶೌಚಾಲಯಗಳು, ನೀರು ಮತ್ತು ಕೈತೊಳೆಯುವ ಪರಿಕರಗಳು ಹೆಚ್ಚು ಬಳಕೆಯಾಗಿ ಕೆಟ್ಟುಹೋಗುವ ಸಂದರ್ಭಗಳಿರುತ್ತವೆ. ಸಮುದಾಯದ ಮುಂದಾಳುಗಳು ಇವುಗಳು ಕೆಡುವುದನ್ನು ಕನಿಷ್ಠಕ್ಕಿಳಿಸಿ, ಶಾಲೆಯ ಕಾರ್ಯಕ್ರಮಗಳಲ್ಲಿ ಇವುಗಳು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳುವುದರಲ್ಲಿ ಮಹತ್ತರ ಪಾತ್ರ ವಹಿಸಬಹುದು.






**ಸ್ಥಳೀಯ ಸಮಿತಿಗಳು, ಪಾಲಕರು ಮತ್ತು ಸಮುದಾಯಗಳ ಪಾತ್ರ**


- ಯೋಜನೆ ಮತ್ತು ಅನುಷ್ಠಾನದ ಸಮಯದಲ್ಲಿ ಪ್ರಮುಖ ಪಾಲುದಾರರು.
- 'ಸ್ವಚ್ಛ ವಿದ್ಯಾಲಯ' ಸೌಲಭ್ಯದ ಅಗತ್ಯಗಳನ್ನು ಪೂರೈಸಲು ಶಾಲಾ ನಿರ್ವಹಣಾ ಅನುದಾನಕ್ಕೆ ಬೆಂಬಲವಾಗಿ ಹಣಕಾಸಿನ ಹಂಚಿಕೆ.
- 'ಸ್ವಚ್ಛ ವಿದ್ಯಾಲಯ' ಸೌಲಭ್ಯದ ಕಾರ್ಯಚಟುವಟಿಕೆಯ ಹಾಗೂ ಅವುಗಳ ಗುಣಮಟ್ಟದ ಕಾರ್ಯವಿಧಾನ ಮತ್ತು ನಿರ್ವಹಣೆಯ ಸಮುದಾಯ ಆಧಾರಿತ ಮೇಲ್ವಿಚಾರಣೆ ಮತ್ತು ತಪಾಸಣೆ.
- ತುರ್ತುಸ್ಥಿತಿಗಳಲ್ಲಿ ಸೌಲಭ್ಯ ಬಳಕೆಗೆ ಸಂಯೋಜಕರು.

## 3.7 ಕಾರ್ಯವಿಧಾನ ಮತ್ತು ನಿರ್ವಹಣೆ

ಶಾಲಾ 'ಸ್ವಚ್ಛ ವಿದ್ಯಾಲಯ' ಸೌಲಭ್ಯದ ನಿರ್ವಹಣೆಯು ಸಾಮೂಹಿಕ ಜವಾಬ್ದಾರಿಯಾಗಿದೆ. ಎಸ್‌ಡಿಎಂಸಿಯ ಸದಸ್ಯರು ಮತ್ತು ಶಾಲಾ ಶಿಕ್ಷಕರು ಶಾಲಾ ಗುಣಮಟ್ಟದ ಕಾರ್ಯವಿಧಾನ ಮತ್ತು ನಿರ್ವಹಣೆಯ ವೇಳಾಪಟ್ಟಿಯ ಹೆಚ್ಚುವರಿ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಅಗತ್ಯವಿದೆ. ಜಿಲ್ಲೆ, ಬಿಆರ್‌ಸಿ/ಸಿಆರ್‌ಸಿ ಸಿಬ್ಬಂದಿಗಾಗಿ ನಿರ್ವಹಣಾ ವೇಳಾಪಟ್ಟಿಯು ಸರಿಯಾದ ರೀತಿಯಲ್ಲಿ ಪಾಲಿಸಲ್ಪಡುತ್ತಿದೆಯೇ ಎಂಬುದನ್ನು ತಪಾಸಣೆ ನಡೆಸಲು ನಿಯಮಿತ ಭೇಟಿಯ ವೇಳಾಪಟ್ಟಿಯನ್ನು ಯೋಜಿಸಬೇಕು. ಈ ಉದ್ದೇಶಕ್ಕಾಗಿ ಯೋಗ್ಯ ಪ್ರಾಧಿಕಾರ/ಎಸ್‌ಡಿಎಂಸಿಯು ಕೇಂದ್ರಗಳಿಗೆ ಭೇಟಿ ನೀಡಿ ಚಟುವಟಿಕೆಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿರುವುದರ ಬಗ್ಗೆ ತಪಾಸಣೆ ನಡೆಸಲು ಮೇಲ್ವಿಚಾರಕರನ್ನು ನೇಮಿಸಬೇಕು. ನಿರ್ವಹಣಾ ವೇಳಾಪಟ್ಟಿಗಳ ಒಂದು ಸಾಮಾನ್ಯ ಪರಿಶೀಲನಾಪಟ್ಟಿ ಹೀಗಿದೆ.

### 3.7.1 ದಿನನಿತ್ಯದ ನಿರ್ವಹಣೆ

- ಶಾಲಾ ಮಕ್ಕಳು ಸ್ವಚ್ಛ ಶೌಚಾಲಯದ ಬಳಕೆಯ ಅರಿವನ್ನು ಹೊಂದಿರಬೇಕು ಮತ್ತು ಶೌಚಾಲಯದ ಸ್ವಚ್ಛತೆ ಕಾಪಾಡಬೇಕು.
- ತರಗತಿಗಳು, ಸಿಬ್ಬಂದಿ ಕೊಠಡಿ ಹಾಗೂ ಅಡುಗೆಮನೆಯ ದಿನನಿತ್ಯದ ಸಾಮಾನ್ಯ ಸ್ವಚ್ಛತೆ.




- ಶಾಲಾ ಆವರಣದಲ್ಲಿ ಯಾವುದೇ ನೀರಿನ ಶೇಖರಣೆಯ (ವಾಟರ್–ಲಾಗಿಂಗ್) ಸಾಧನಗಳ ಸ್ವಚ್ಛತೆ.
- ಸಾಮಾನ್ಯ ಸಂಗ್ರಹಣೆಯ ಸಾಧನಗಳಲ್ಲಿ, ಡೆಸ್ಕ್, ಬೆಂಚ್, ಮಕ್ಕಳ ಆಟಿಕೆ/ಪುಸ್ತಕ ಸಂಗ್ರಹಗಳ ಮೇಲಿನ ಧೂಳು ತೆಗೆಯುವುದು.
- ಕೈತೊಳೆಯುವ ಕಡೆ ಸಾಬೂನು ಇದೆಯೋ ಇಲ್ಲವೋ ಖಚಿತಪಡಿಸಿಕೊಳ್ಳುವುದು.
- ಎಲ್ಲ ಶೌಚಾಲಯಗಳು, ಮೂತ್ರಾಗಾರಗಳು ಹಾಗೂ ನೀರಿನ ನಲ್ಲಿಗಳು ಬಳಕೆಯ ಸ್ಥಿತಿಯಲ್ಲಿವೆಯೇ, ಕಾರ್ಯ ನಡೆಸುತ್ತಿವೆಯೇ ಖಚಿತಪಡಿಸಿಕೊಳ್ಳುವುದು.
- ಎಲ್ಲ ಶೌಚಾಲಯಗಳು, ಮೂತ್ರಾಗಾರಗಳು ಸ್ವಚ್ಛವಾಗಿವೆಯೇ ಎಂದು ಖಚಿತಪಡಿಸಿಕೊಳ್ಳುವುದು.
- ಎಲ್ಲ ಬಾಗಿಲು, ಕಿಟಕಿ, ಅಲ್ಮೆರಾದ ಬೀಗಗಳನ್ನು ಪರೀಕ್ಷಿಸಿ ಸಡಿಲವಾಗಿದ್ದರೆ ಬಿಗಿಯಾಗಿ ಜೋಡಿಸಿಕೊಳ್ಳುವುದು.

### 3.7.2 ಮಾಸಿಕ ನಿರ್ವಹಣೆ

- ಎಲ್ಲ ಸಾಧನ ಸಲಕರಣೆಗಳು, ಗೋಡೆಗಳು ಇತ್ಯಾದಿಗಳ ಧೂಳನ್ನು ಸ್ವಚ್ಛಗೊಳಿಸುವುದು.
- ಬೇಡದ ಅವಶೇಷಗಳು/ಕಲ್ಲಿನ ಪುಡಿಯ ರಾಶಿ, ಕಟ್ಟಡದ ತ್ಯಾಜ್ಯ ಮೊದಲಾದವುಗಳು ಶಾಲಾ ಆವರಣದಲ್ಲಿ ಇರದಂತೆ ತೆಗೆದುಹಾಕುವುದು.
- ಶಾಲಾ ಆವರಣದಲ್ಲಿ, ಮೈದಾನದಲ್ಲಿ ನೀರು ನಿಂತಿದೆಯೇ ಪರೀಕ್ಷಿಸಬೇಕು.
- ಮೈದಾನ, ಅಂಗಳ, ನೀರು ಹರಿದುಹೋಗುವ ಪ್ರದೇಶದಲ್ಲಿ ಚರಂಡಿ ಮುಚ್ಚಿದೆಯೇ ಪರೀಕ್ಷಿಸಿಸಬೇಕು.
- ಅನಾಮೆಲ್ ಪೇಂಟ್ ಹಚ್ಚಿದ ಗೋಡೆ, ಬಾಗಿಲು, ಕಿಟಕಿ, ಅಲ್ಮೇರಾದ ಬಾಗಿಲುಗಳ ಮೇಲಿರುವ ಕಲೆ ಮತ್ತು ಗುರುತುಗಳನ್ನು ಒದ್ದೆಬಟ್ಟೆಯಿಂದ, ಸೋಪು ನೀರಿನಿಂದ ಸ್ವಚ್ಛಗೊಳಿಸಬೇಕು.
- ಗೋಡೆ, ಸೀಲಿಂಗ್, ನೆಲದ ಮೇಲೆ ತೇವವಾದ ಗುರುತಿದೆಯೇ ಪರೀಕ್ಷಿಸಬೇಕು.
- ಶಾಲಾ ಕಟ್ಟಡದಲ್ಲಿ ಗೆದ್ದಲುಗಳಿವೆಯೇ ಪರೀಕ್ಷಿಸಬೇಕು.
- ಬಾಗಿಲು, ಕಿಟಕಿ, ಅಲ್ಮೆರಾಗಳ ಎಲ್ಲ ಭಾಗಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಪರೀಕ್ಷಿಸಬೇಕು.
- ಮೇಲ್ಛಾವಣಿ, ಗೋಡೆಗಳ ಮೇಲೆ ಬಿರುಕುಗಳಿವೆಯೇ ಪರೀಕ್ಷಿಸಬೇಕು.
- ಮುಖ್ಯ ನೀರಿನ ಸಂಗ್ರಹ ಮಾಡುವ ಟ್ಯಾಂಕ್ ಮುಚ್ಚಿಕೊಂಡಿದೆಯೇ, ಸೋರುತ್ತಿದೆಯೇ, ಸ್ವಚ್ಛವಾಗಿದೆಯೇ ಪರೀಕ್ಷಿಸಬೇಕು.
- ಎಲ್ಲ ಚರಂಡಿಯ ಮೇಲ್ಮುಚ್ಚಿಗೆ/ ತಪಾಸಣೆಯ ಚರಂಡಿಯ ಮೇಲ್ಮುಚ್ಚಿಗೆಗಳು ಸರಿಯಾದ ಸ್ಥಳದಲ್ಲಿದೆಯೇ, ಏನೂ ಹಾನಿಯಾಗುವಂತಿಲ್ಲವೇ? ಎಂದು ಪರಿಶೀಲಿಸಬೇಕು.
- ನಲ್ಲಿ, ವಾಲ್ವ್, ಫ್ಲಶಿಂಗ್ ವ್ಯವಸ್ಥೆಯಲ್ಲಿ ಏನಾದರೂ ಸೋರಿಕೆಯಾಗುತ್ತಿದೆಯೇ ಪರಿಶೀಲಿಸಬೇಕು.
- ಒಳಚರಂಡಿ, ಚರಂಡಿ, ತ್ಯಾಜ್ಯ ನೀರು ಹರಿಯುವ ಪೈಪ್‌ಗಳು ಕಟ್ಟಿಕೊಂಡಿವೆಯೇ ಪರೀಕ್ಷಿಸಬೇಕು.
- ಪ್ರಥಮ ಚಿಕಿತ್ಸಾ ಕಿಟ್ ನವೀಕರಿಸಲ್ಪಟ್ಟಿದ್ದೆಯೇ, ಅದರಲ್ಲಿನ ಎಲ್ಲ ಔಷಧಗಳೂ ಮುಕ್ತಾಯ ದಿನಾಂಕದೊಳಗೇ ಇವೆಯೇ ಪರಿಶೀಲಿಸಬೇಕು.
- ಕಿಟಕಿ ಬಾಗಿಲುಗಳ ಹಿಂಜಸ್‌ಗಳು, ಬೋಲ್ಟ್‌ಗಳು, ಇತರ ಭಾಗಗಳು ಸರಿಯಾಗಿವೆಯೇ ಪರೀಕ್ಷಿಸಬೇಕು. ಫ್ಯಾನ್, ಟ್ಯೂಬ್‌ಲೈಟ್, ಬಲ್ಬಗಳ ಮೇಲಿನ ಧೂಳನ್ನು ತೆಗೆಯಬೇಕು.

### 3.7.3. ಕಾಲಕ್ಕನುಗುಣವಾದ/ತ್ರೈಮಾಸಿಕ ನಿರ್ವಹಣೆ (ಮುಂಗಾರಿಗೆ ಮೊದಲು)


- ನೀರಿನ ಟ್ಯಾಂಕಿನಲ್ಲಿ ಸೋರಿಕೆ ಮೊದಲಾದ ತೊಂದರೆಗಳಿವೆಯೇ ಸಂಪೂರ್ಣವಾಗಿ ಪರೀಕ್ಷಿಸಿ ನೀರು ನಿರೋಧಕ ಸಿಮೆಂಟ್ ಅಥವಾ ಸೀಲ್ಯಾಂಟ್ ಬಳಸಿ ಸೀಲ್ ಮಾಡಬೇಕು ಹಾಗೂ ನಿಯಮಿತ ಅವಧಿಯೊಳಗೆ ಸ್ವಚ್ಛಗೊಳಿಸುತ್ತಿರಬೇಕು.
- ಭೂಮಿಯ ಅಡಿಯಲ್ಲಿ ಇರುವ ತೊಟ್ಟಿಗಳಾದರೆ ಮುಚ್ಚಿಗೆ ಮತ್ತು ಅಂಚನ್ನು ಮುಟ್ಟದೆ ಹಾಗೇ ಇಡಲಾಗಿದೆಯೇ, ಸುತ್ತಲಿನ ನೆಲದ ಮಟ್ಟದಿಂದ ಸಾಕಷ್ಟು ಎತ್ತರದಲ್ಲಿದೆಯೇ ಎಂದು ಪರೀಕ್ಷಿಸಬೇಕು.
- ಮೇಲ್ಛಾವಣಿಯನ್ನು ಸ್ವಚ್ಛಗೊಳಿಸುವ ಮೂಲಕ ನೀರು ಹೊರಹೋಗುವ ಪೈಪ್‌ಗಳು, ಬಿರುಕುಗಳ, ಮುರಿದ ಗೋಲಾ, ಚಜ್ಜಾ ಇತ್ಯಾದಿಗಳನ್ನು ಪರಿಶೀಲಿಸುವುದು, ಸೋರುವ ಮೇಲ್ಛಾವಣಿಗಳನ್ನು ಪರಿಶೀಲಿಸುವುದು ಮತ್ತು ಸರಿಪಡಿಸುವುದು.
- ಶಾಲಾ ಮೈದಾನವನ್ನು ಮಟ್ಟಸ ಮಾಡುವುದು ಹಾಗೂ ಸ್ವಚ್ಛಗೊಳಿಸುವುದು.
- ವಿದ್ಯುತ್ ತಂತಿಗಳನ್ನು ಮತ್ತು ಅರ್ಥಿಂಗ್ (ಅನ್ವಯಿಸಿದ್ದರೆ) ಇದೆಯೋ ಸಂಪೂರ್ಣವಾಗಿ ಪರೀಕ್ಷಿಸಬೇಕು.
- ನೀರಿನ ಟ್ಯಾಂಕ್‌ಗಳನ್ನು ಕಾಲಕ್ಕನುಗುಣವಾಗಿ ಸ್ವಚ್ಛಗೊಳಿಸಬೇಕು.
- ಪ್ರತಿ ಮಗುವಿಗೂ 10 ಲೀ. ನಂತೆ ಶುದ್ಧ ನೀರು ಸಂಗ್ರಹವಾಗುವಂತೆ ವ್ಯವಸ್ಥೆ ಮಾಡುವುದು.
- ವಿದ್ಯುತ್ ವ್ಯವಸ್ಥೆಗಳನ್ನು, ಅರ್ಥಿಂಗ್ಸ್ ಅನ್ನು ತಪಾಸಣೆ ನಡೆಸಬೇಕು.
- ನೀರು ಸಂಗ್ರಹಿಸುವ ಟ್ಯಾಂಕನ್ನು ಮೇಲೆ ವಿವರಿಸಿದ ರೀತಿಯಲ್ಲಿ ಸಂಪೂರ್ಣವಾಗಿ ಸ್ವಚ್ಛಗೊಳಿಸುತ್ತಿರಬೇಕು.

### 3.7.4. ವಾರ್ಷಿಕ ನಿರ್ವಹಣೆ

- ದೀರ್ಘಾವಧಿ ರಜದ ಅವಧಿಯಲ್ಲಿ ಸಾಮಾನ್ಯ ದುರಸ್ತಿ ಮತ್ತು ನಿರ್ವಹಣೆ.
- ಶಾಲಾ ಕಟ್ಟಡದ ದುರಸ್ತಿ ಕೆಲಸ.
- ಸಂಯೋಜಕ ಚಿತ್ರಕಲೆಯ ಕೆಲಸ.
- ಚರಂಡಿ ಮತ್ತು ತ್ಯಾಜ್ಯನೀರು ಹರಿಯುವ ವ್ಯವಸ್ಥೆಯ ಸಂಪೂರ್ಣ ಸ್ವಚ್ಛತೆ.
- ತಪಾಸಣೆ ಮತ್ತು ಜಂಕ್ಷನ್ ಚೇಂಬರಿನ ಸಂಪೂರ್ಣ ಸ್ವಚ್ಛತೆ. ಸೋರಿಕೆ ಇದ್ದರೆ ಅದರ ದುರಸ್ತಿ.
- ಸೆಪ್ಟಿಕ್ ಟ್ಯಾಂಕ್ ಮತ್ತು ಲೀಚ್ ಹೊಂಡದ ಸಂಪೂರ್ಣ ಸ್ವಚ್ಛತೆ.
- ಯಾವುದಾದರೂ ವಿದ್ಯುತ್ ಮಾರ್ಗ ಹಾಗೂ ಅರ್ಥಿಂಗ್‌ನ ಪ್ರಮುಖ ದುರಸ್ತಿ ಇದ್ದರೆ ಮಾಡುವುದು.

### 4. ಸಮಾರೋಪ

ಶಾಲೆಯಲ್ಲಿ 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮವು ಮೂಲಭೂತ ಸೌಕರ್ಯದ ನಿರ್ಮಾಣ, ನೈರ್ಮಲ್ಯದ ನಡವಳಿಕೆಗಳನ್ನು ರೂಢಿಸಿಕೊಳ್ಳುವ ಮನೋಧರ್ಮವನ್ನು ನಿರ್ಮಿಸುವ ಪ್ರಕ್ರಿಯೆಯತ್ತ ಸಮಗ್ರತೆಯ ದೃಷ್ಟಿಯುಳ್ಳ ಸಾಧನವಾಗಿದೆ. 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದ ಹೆಚ್ಚಿನ ಕಲಿಕಾ ಸಾಮಗ್ರಿಗಳು ಅದರ ಅನುಷ್ಠಾನ ಹಾಗೂ ಮಕ್ಕಳಿಗೆ ಅದರಿಂದಾಗುವ ಸಕಾರಾತ್ಮಕ ಆರೋಗ್ಯಲಾಭ, ತನ್ಮೂಲಕ ಶಾಲೆಯಲ್ಲಿ ಮಕ್ಕಳ ಹಾಜರಾತಿ ಮತ್ತು ಶಾಲಾ ಚಟುವಟಿಕೆಯಲ್ಲಿ ಪ್ರಗತಿ ತೋರಿಸುವುದು ಇವುಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ.



| 'ಸ್ವಚ್ಛ ವಿದ್ಯಾಲಯ'ಕ್ಕೆ ಸಂಬಂಧಿಸಿದ ಪಠ್ಯಕ್ರಮಕ್ಕಾಗಿ ವೇಳಾಪಟ್ಟಿ | |
|---|---|
| ಸೋಮವಾರ | ವೈಯಕ್ತಿಕ ನೈರ್ಮಲ್ಯ |
| ಮಂಗಳವಾರ | ಆಹಾರನೈರ್ಮಲ್ಯ |
| ಬುಧವಾರ | ಕುಡಿಯುವ ನೀರಿನ ಸುರಕ್ಷಿತ ನಿರ್ವಹಣೆ |
| ಗುರುವಾರ | ತ್ಯಾಜ್ಯ ನಿರ್ವಹಣೆ |
| ಶುಕ್ರವಾರ | ಮುಟ್ಟಿನ ಆರೋಗ್ಯ ನಿರ್ವಹಣೆ |
| ಶನಿವಾರ | ಪಾಲಕರು ಮತ್ತು ಸಮುದಾಯದ ಪಾಲ್ಗೊಳ್ಳಿವಿಕೆ |

ಶಾಲೆಗಳಲ್ಲಿ 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮದ ಸುಸ್ಥಿರತೆಗಾಗಿ ಅದರ ಅಭ್ಯಾಸ ಮತ್ತು ತಿಳಿವಳಿಕೆಯನ್ನು ನೀಡಲು ಹಾಗೂ ನಮ್ಮ ಶಾಲೆಗಳು ಸ್ವಚ್ಛವಾಗಿ ಇರಲು ಪರಿಣಾಮಕಾರಿ ಮಾಧ್ಯಮವೆಂದರೆ ಮುಂಜಾನೆ ಪ್ರಾರ್ಥನಾ ಸಮಯದಲ್ಲಿ ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳಿಗೆ ಆ ಕುರಿತು ಉಪನ್ಯಾಸ ನೀಡುವುದು; ಶಿಕ್ಷಕರು ನಿಯಮಿತ ಪಠ್ಯಕ್ರಮದಲ್ಲಿ 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮವನ್ನು ಸೇರಿಸುವುದು; 'ಸ್ವಚ್ಛ ವಿದ್ಯಾಲಯ' ಸಂಬಂಧಿಸಿ ಆಟಗಳನ್ನು ಏರ್ಪಡಿಸುವುದು, ತಿಂಗಳಲ್ಲಿ ಒಂದು ಶನಿವಾರವನ್ನು 'ಸ್ವಚ್ಛ ವಿದ್ಯಾಲಯ' ಕಾರ್ಯಕ್ರಮಕ್ಕೆ ಮೀಸಲಾಗಿಟ್ಟು, ಆ ವೇಳೆಗೆ ಸ್ಪರ್ಧೆ, ಸಮುದಾಯದ ಮೇಲೆ ಪ್ರಭಾವ ಮೊದಲಾದವಕ್ಕೆ ಮೀಸಲಿಡಲು ಒತ್ತಿಕೊಡಬೇಕು. ಈ ಮೇಲಿನ ಮಕ್ಕಳಸ್ನೇಹಪರ ಅಂತರಶಿಕ್ಷಣ ಪಠ್ಯಕ್ರಮವು ಜೀವನ ಕೌಶಲ, ಸಮುದಾಯದ ಸೇವಾ ಚಟುವಟಿಕೆ, ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಪೀರ್–ಪೀರ್ ಸಂವಹನ ಇವುಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ. ಈ ಬಗೆಯ ಪಠ್ಯಕ್ರಮವು ವೈಯಕ್ತಿಕ ಮತ್ತು ಸಾಮೂಹಿಕ ಸಾಮರ್ಥ್ಯ, ಮಾಹಿತಿಗೆ ಅವಕಾಶ ಮತ್ತು ಮಾಹಿತಿಯನ್ನು ಪಡೆಯುವುದು ಇವುಗಳ ಜೊತೆಗೆ ಜೋಡಿಸಿಕೊಂಡಿದೆ.

**ಉಲ್ಲೇಖಗಳು:**


1. ಸ್ವಚ್ಛ ಭಾರತ್ ಸ್ವಚ್ಛ ವಿದ್ಯಾಲಯ ಕರಪತ್ರ, ಎಂಎಚ್‌ಆರ್‌ಡಿ.
2. ಮಕ್ಕಳ ಸ್ನೇಹಿ ಶಾಲೆಗಳ ಕೈಪಿಡಿ, ಯುನಿಸೆಫ್.
3. ಉತ್ತಮ ಪ್ರೋಗ್ರಾಮಿಂಗ್‌ನೆಡೆಗೆ "ಅ ಮಾನ್ಯುವಲ್ ಒನ್ ಸ್ಕೂಲ್" ಯುನಿಸೆಫ್.
4. ಶಾಲೆಯಲ್ಲಿ 'ಘಾಷ್' ಸಂಯೋಜಿಸುವಿಕೆಯ ಶಿಕ್ಷಕ ಮಾರ್ಗದರ್ಶಿ, ವಾಶಿಂಗ್ಟನ್ ಡಿ.ಸಿ., ಘಾಷ್ ಪ್ಲಸ್.
5. ಸ್ವಚ್ಛ ಪಾಠಶಾಲಾ, ಶಾಲೆಗಳಲ್ಲಿ 'ಸ್ವಚ್ಛ ವಿದ್ಯಾಲಯ', ತೆಲಂಗಾಣಾ ಎಸ್‌ಎಸ್‌ಎ, ಎಎಸ್‌ಸಿಐ ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶಿ.
6. ಸುಸ್ಥಿರ ಅಭಿವೃದ್ಧಿ ಗುರಿ, ಯುಎನ್‌ಡಿಪಿ.


ಅನುವಾದ: ಸ್ನೇಹ ಸ್ವಯಂ ಸೇವಾ ಸಂಸ್ಥೆ, ಮೈಸೂರು
website: www.sneha-ngo.org